



ತಜಕಿಸ್ತಾನದಲ್ಲಿ ಅತ್ಯಂತ ಸುಂದರ ಪ್ರದೇಶ ಯಾವುದು ಎಂಬ ಪ್ರಶ್ನೆಗೆ ನೋಡಿದವರು ಹೇಳುವ ಉತ್ತರ – ಪಂಜಿಕೆಂಟ್!

ಪಂಜಿಕೆಂಟ್ ಚಾರಿತ್ರಿಕ ಸ್ಥಳವಾಗಿದ್ದು ಪಂಚಪ್ರದೇಶಗಳನ್ನು ಒಳಗೊಂಡಿದೆ ಎಂಬ ಅರ್ಥ. ಈ ನಗರ ಈಗ ಪ್ರಸಿದ್ಧವಾಗಿರುವುದು ಚರಿತ್ರೆಯಿಂದಲ್ಲ. ಸನಿಹವಿರುವ ಏಳು ಸರೋವರಗಳಿಂದಾಗಿ. ಇದು ಏಳು ಸರೋವರಗಳ ಸ್ವಪ್ನಲೋಕವಾಗಿದ್ದು, ತಜಿಕ್ ಭಾಷೆಯಲ್ಲಿ 'ಹಫ್ತ್ ಕೂಲ್' ಎಂದೂ ಕರೆಸಿಕೊಳ್ಳುತ್ತದೆ.

ತಜಕಿಸ್ತಾನದ ಬಹುವಿಸ್ತಾರ ಭಾಗವಾದ ಜೆಫರ‍್ಯಾನ್ ಪ್ರದೇಶದಲ್ಲಿ, ಉಜ್ಬೆಕಿಸ್ತಾನದ ಗಡಿಗೆ ಹೊಂದಿಕೊಂಡಂತೆ ಪಂಜಿಕೆಂಟ್ ಬರುತ್ತದೆ. ಫಾನ್ ಪರ್ವತ ಶ್ರೇಣಿಗಳ ಭಾಗವಾದ ಈ ಪ್ರದೇಶದಲ್ಲಿ ಗ್ಲೇಸಿಯರುಗಳಿಂದ ಹರಿದುಬರುವ ನೀರು ಎರಡೂವರೆ ಸಾವಿರ ಮೀಟರ್ ಎತ್ತರದಲ್ಲಿ ಮೊದಲಬಾರಿಗೆ ಕೊಳವೊಂದನ್ನು ನಿರ್ಮಿಸುತ್ತದೆ. ಅಲ್ಲಿಂದ ಮುಂದೆ ನದಿ ಹರಿಯುವುದಿಲ್ಲ. ಅದು ಭೂಗತವಾಗಿ ಹರಿದು, ಮತ್ತೆ ಎರಡು ಕಿಲೋಮೀಟರ್ ದೂರದ ಕೆಳಗೆ ಇನ್ನೊಂದು ಕೊಳವನ್ನು ನಿರ್ಮಿಸುತ್ತದೆ. ಈ ಕೊಳದ ಬಳಿಕ ಮತ್ತೆ ನದಿ ಮಾಯ!

ಇನ್ನೂ ಸ್ವಲ್ಪ ಕೆಳಗೆ ಬಂದರೆ ಇನ್ನೊಂದು ಕೊಳ! ಹೀಗೆ ಒಂದೇ ನದಿ ಪ್ರಕಟವಾಗಿ– ಮಾಯವಾಗಿ ಕಣ್ಣಾಮುಚ್ಚಾಲೆಯಾಡುತ್ತಾ ಒಂದೊಂದಾಗಿ ಏಳುಕೊಳಗಳನ್ನು ಅಲ್ಲಲ್ಲ, ಏಳು ಸರೋವರಗಳನ್ನು ನಿರ್ಮಿಸಿದೆ. ದೂರದೂರದ ದೇಶಗಳಿಂದ ಜನ ಈ ಏಳು ಸರೋವರಗಳನ್ನು ನೋಡಿ ಕಣ್ತುಂಬಿಕೊಳ್ಳುವುದಕ್ಕಾಗಿ ಮೇ ತಿಂಗಳಿನಿಂದ ಅಕ್ಟೋಬರ್‌ವರೆಗೆ ಇಲ್ಲಿಗೆ ಭೇಟಿ ನೀಡುತ್ತಾರೆ.

ಮತ್ತೇನಾಗುತ್ತದೆ?

ನವೆಂಬರ್ ವೇಳೆಗೆ ಅಷ್ಟರಲ್ಲಿ ಚಳಿಗಾಲ ತೀವ್ರಗೊಳ್ಳುತ್ತ ಗ್ಲೇಸಿಯರ್ ನೀರಾಗುವುದು ನಿಲ್ಲುತ್ತದೆ. ನದಿಯ ಅಬ್ಬರ ತಗ್ಗಿ ಕೊಳಗಳು ಕಾಸಿದ ತುಪ್ಪದ ಹಾಗೆ ಕುಗ್ಗಿಹೋಗುತ್ತವೆ. ಅದರ ಮೇಲೆ ಎಲ್ಲೆಲ್ಲೂ ಮಂಜಿನ ಮಳೆ ಐದಾರು ತಿಂಗಳು ಸುರಿದು ಇಡೀ ಫಾನ್ ಪರ್ವತಗಳು ನಿರ್ಜೀವವಾಗಿ ನಿಲ್ಲುತ್ತವೆ. ಅದಕ್ಕೇ ಪಂಜಿಕೆಂಟಿಗೆ ಹೋಗಬೇಕೆಂದರೆ ಮೇ ತಿಂಗಳಿಂದ ಅಕ್ಟೋಬರ್‌ವರೆಗೆ ಸುಸಮಯ.

'ಹೈಕ್ ತಜಕಿಸ್ತಾನ' ಎಂಬ ಯುವಕರ ತಂಡ ವಾರಾಂತ್ಯಗಳಲ್ಲಿ 'ಪಂಜಿಕೆಂಟ್ ಹೈಕ್' ಏರ್ಪಡಿಸುತ್ತಾರೆ. ಶನಿವಾರ ಬೆಳಿಗ್ಗೆ ಹೋದವರು ಫಾನ್ ಪರ್ವತ ಪ್ರದೇಶಗಳ ಮಧ್ಯೆ ಯಾವುದಾದರೂ ಕೊಳದ ಸಮೀಪ ಹೋಂ ಸ್ಟೇನಲ್ಲಿ ಪ್ರವಾಸಿಗರನ್ನು ಉಳಿಸಿ ಬೆಳಿಗ್ಗೆ 6–7ನೇ ಸರೋವರಗಳಿಗೆ ಚಾರಣ ಮಾಡಿಸುತ್ತಾರೆ. ಇದೊಂದು ಅದ್ಭುತ ಅನುಭವ.

ಈ ಸಪ್ತ ಕೊಳಗಳ ವಿಶೇಷಗಳು ಅನೇಕ. ಮೊದಲ ಕೊಳದ ಹೆಸರು 'ಮಿಜಗಾನ್' – ಅಂದರೆ ಕಣ್ಣು ರೆಪ್ಪೆ ಅಂತ. ಎರಡನೆಯದು 'ಸೊಯಾ' – ಅಂದರೆ ನೆರಳು. ಮೂರನೆಯದು 'ಗುಷೋರ್' – ತಿಳಿವಳಿಕೆ, ನಾಲ್ಕನೆಯದು 'ನೋಫಿನ್' – ಹೊಕ್ಕಳು, ಐದನೆಯದು 'ಖುರ್ದಿಕ್' – ಸಣ್ಣದು ಅಂತ, ಆರನೆಯದು 'ಮರ್‌ಗುಜೋರ್' – ಅಂದರೆ ಹುಲ್ಲುಗಾವಲು, ಮತ್ತು ಏಳನೆಯದರ ಹೆಸರು 'ಹಜೋರ್ ಚಷ್ಮಾ' – ಸಾವಿರ ಒರತೆಗಳು ಎಂದರ್ಥ. ಹೈಸ್ಕೂಲಿನ ಕನ್ನಡ ಪುಸ್ತಕದಲ್ಲಿ ಓದಿದ ಅಚ್ಛೋದ ಸರೋವರದ ಪಾಠ ಈ ಕೊಳಗಳನ್ನು ನೋಡುವಾಗ ನೆನಪಾಯ್ತು. ಕವಿ ಪಂಪನ ವರ್ಣನೆ ಇಲ್ಲಿ ಸಾಕಾರಗೊಂಡಿರುವಂತೆ ಭಾಸವಾಯಿತು.

ಈ ಕೊಳಗಳ ಮತ್ತೊಂದು ವಿಶೇಷ, ಶುದ್ಧಸ್ಫಟಿಕ ಸದೃಶ ಜಲರಾಶಿಯ ಆಳದಲ್ಲಿ ಅಮೂಲ್ಯ ಹರಳುಗಳಿವೆ. ಪುಣ್ಯವಿದ್ದರೆ ನಿಮಗೆ ಸಿಗಬಹುದು. ನೀರಲ್ಲಿ ಹೊಳೆಯುವ ಈ ಹರಳುಗಳಿಗಾಗಿ ಕೈಹಾಕಿದರೆ ಕೈ ಕೊರಡಾಗುವಷ್ಟು ತಣ್ಣನೆ ನೀರು, ನೇರ ಹಿಮಾಲಯದಿಂದ ಬಂದುದು!

ಇಲ್ಲಿನ ಹೋಂಸ್ಟೇಗಳಲ್ಲಿ ತಜಕಿ ಆಹಾರದ ರುಚಿಯನ್ನು ನೋಡಬಹುದು. ಮಾಂಸಾಹಾರಿಗಳಾದರೆ ಇಲ್ಲಿ ಕಾದಿದೆ ಭೂರಿ ಭೋಜನ. ಸಸ್ಯಾಹಾರಿಗಳಿಗೆ ಹಣ್ಣು ಹಾಗೂ ತರಕಾರಿಗಳ ರಾಶಿಯೇ ಎದುರಿಗಿರುವುದರಿಂದ ಹೇಗೋ ಹೊಟ್ಟೆ ತುಂಬಿಸಿಕೊಳ್ಳಬಹುದು. ಸಪ್ತ ಕೊಳಗಳನ್ನು ನೋಡಿಬಂದಾಗ ಅದ್ಭುತ ರಮ್ಯ ಪ್ರದೇಶವೊಂದನ್ನು ನೋಡಿದ ಸಾರ್ಥಕ ಭಾವ ಮೂಡಿತು! ■

## ಪಂಜಿಕೆಂಟ್ ಎಲ್ಲಿದೆ?

ಮಧ್ಯ ಏಷಿಯಾದ ಪುಟ್ಟ ರಾಷ್ಟ್ರ ತಜಕಿಸ್ತಾನದ ರಾಜಧಾನಿ ದುಶಾಂಬೆಯಿಂದ 230 ಕಿ.ಮೀ. ದೂರದಲ್ಲಿ ಪಂಜಿಕೆಂಟ್ ಇದೆ. ಪಂಜಿಕೆಂಟಿಗೆ ಹೋಗಿ ಅಲ್ಲಿಂದ ಈ ಸರೋವರಗಳ ಹಾದಿ ಹಿಡಿಯಬೇಕು. ಸುಮಾರು 50 ಕಿ.ಮೀ. ಕಚ್ಚಾರಸ್ತೆಯಲ್ಲಿ ಸಾಗಬೇಕು. ಯುರೋಪಿಯನ್ನರು ತಮ್ಮದೇ ಕೆರವಾನ್‌ಗಳಲ್ಲಿ ಬಂದು ಈ ಕೊಳಗಳ ಬಳಿ ಉಳಿದುಹೋಗುತ್ತಾರೆ. ಅಲ್ಲಲ್ಲಿ ಹೋಂ ಸ್ಟೇಗಳು ಇವೆ. ಐಷಾರಾಮಿ ಎನ್ನುವಂತಿಲ್ಲವಾದರೂ ಸಾಮಾನ್ಯ ವಾಸಕ್ಕೆ ತೊಂದರೆಯಿಲ್ಲ.